ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಭದ್ರಾವತಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 6402/21

ಪ್ರಾ.ಸಾ. : 9

ಚಾ.ಸಾ. : 15

| | | |
|---|---|---|
| ಹೆಸರು | : | ವಿಲ್ಸನ್ |
| ತಂದೆಯ ಹೆಸರು | : | ದಾನಂ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಉಜ್ಜನಿಪುರ |

ಪ್ರಮಾಣೀಕರಿಸಲಾದ ದಿನಾಂಕಃ 04.07.2024

**ಮುಖ್ಯ ವಿಚಾರಣೆಃ** ಮಾನ್ಯ ಸ. ಸ. ಅ. ರವರಿಂದ:

ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಸದರಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 30.08.20 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಲಕ್ಷ್ಮಣ ಮೂರ್ತಿ ಎಂಬುವವರ ಮನೆ ಬಳಿ ಸಹಿ ಮಾಡಿರುತ್ತೇನೆ. ವರದಕ್ಷಿಣೆ ವಿಚಾರವಾಗಿ ಪೊಲೀಸರು ಪಂಚನಾಮೆ ಮಾಡಿದ್ದು ಸದರಿ ಸಮಯದಲ್ಲಿ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ16 ಸಹಿ ಮಾಡಿರುತ್ತಾರೆ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸ.ಸ.ಅ. ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಸ. ಸ. ಅ. ರವರಿಂದಃ

ನಾನು ದಿಃ 31.08.20 ರಂದು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ . ಸದರಿ ಸಮಯದಲ್ಲಿ ಚಾಸಾ1 ರವರು ಸ್ಥಳದಲ್ಲಿ ಹಾಜರಿದ್ದು ಅವರನ್ನು ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ . ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ ಎಂದರೆ ಸರಿ . ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು ಗುರುತಿಸಲಾಗಿರುತ್ತದೆ.

<u>**ಆರೋಪಿತರ ಪರವಾಗಿ ಪಾಟೀ ಸವಾಲುಃ**</u> ಶ್ರೀ ಎಸ್ ಆರ್ ವಕೀಲರಿಂದಃ

ನಾನು ಹುಟ್ಟಿದಾಗಿನಿಂದ ಉಜ್ಜನಿಪುರದಲ್ಲಿ ವಾಸ ಇದ್ದೇನೆ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರ ಹೇಳಿಕೆ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ನಾನು ನಿಪಿ2 ಕ್ಕೆ ಪೊಲೀಸ ಠಾಣೆಯಲ್ಲಿ ಸಹಿ ಮಾಡಿದ್ದರು ಸಹ ಚಾಸಾ1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

(ಲೋಕೇಶ ಸಿ.ಎನ್.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ